**ದಿನಾಂಕಃ19-11-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿಪರ: ಶ್ರೀ.ಆರ್.ಹೆಚ್. ವಕೀಲರಿಂದಃ-**

ನಿಪಿ.10ರ ನಕ್ಷೆಯನ್ನು ತಹಸಿಲ್ದಾರರವರ ಕಛೇರಿಯಿಂದ ಬಂದ ಆಧಾರದ ಮೇಲೆ ನಿಪಿ.10ರ ನಕ್ಷೆಯನ್ನು ದೃಢೀಕರಿಸಿ ಗರ್ಜೆ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಗಳು ಯಥಾ ನಕಲನ್ನು ದೃಢೀಕರಿಸಿ ನೀಡುತ್ತಾರೆ. ಕಡೂರು ತಹಸಿಲ್ದಾರರವರು ಗರ್ಜೆ ಗ್ರಾಮ ಪಂಚಾಯಿತಿಯವರಿಗೆ ನೀಡಿದ ನಕ್ಷೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ.12 ಎಂದು ಗುರುತಿಸಲಾಯಿತು.

ನಿಪಿ.10 ಮತ್ತು 12ರ ನಕಾಶೆಗೆ ಸಂಬಂಧಿಸಿದಂತೆ ಯಾವುದಾದರು ಪ್ರಾಧಿಕಾರದಿಂದ ಅಥವಾ ಯಾವುದೇ ವ್ಯಕ್ತಿಯಿಂದ ಮೇಲ್ಮನವಿ ಸಲ್ಲಿಸಿರುವುದಕ್ಕೆ ಸಂಬಂಧಿಸಿದಂತೆ ನಮ್ಮ ಮುಂದೆ ಯಾವುದಾದರು ತಕರಾರು ಅಥವಾ ನೋಟೀಸು ಬಂದಿದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ತನ್ನ ಬಳಿ ಇರುವ ದಾಖಲೆಗಳನ್ನು ಪರಿಶೀಲಿಸಿ ಪ್ರತಿವಾದಿ ಲಕ್ಷ್ಮಣ ಎನ್ನುವವರು ಸರಿಯಾಗಿ ಅಳತೆ ಮಾಡದೆ ಇ-ಸ್ವತ್ತನ್ನು ವಾದಿಗೆ ನೀಡಬಾರದು ಎಂದು ತಕರಾರು ಅರ್ಜಿಯನ್ನು ಗರ್ಜೆ ಗ್ರಾಮ ಪಂಚಾಯಿತಿಗೆ ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ.

**(ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು, ಅನುಮತಿ ನೀಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

ಸಹಿ/-

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು ಕಡೂರು.